

ವಾರದ ಪತ್ರ

## ಪೊಲೀಸರ ಬಗ್ಗೆ ತಪ್ಪು ಸಂದೇಶ

ಸಾಮಾನ್ಯವಾಗಿ ನಾನು ಧಾರಾವಾಹಿಗಳನ್ನು ನೋಡುವುದಿಲ್ಲ. ಕಲರ್ಸ್ ಕನ್ನಡದ 'ದೃಷ್ಟಿಬೊಟ್ಟು' ಧಾರಾವಾಹಿಯನ್ನು ಮನೆಯವರು ನೋಡುತ್ತಿದ್ದಾಗ, ಅಕಸ್ಮಾತ್ತಾಗಿ ಅದರ ಒಂದು ದೃಶ್ಯವನ್ನು ನೋಡಿದೆ. ಕಪ್ಪಗಿನ ಹುಡುಗಿಯನ್ನು ದೊಡ್ಡ ಕುರ್ಚಿಯ ಮೇಲೆ ವಿಕಾರವಾಗಿ ಅಲಂಕಾರ ಮಾಡಿ ಕೂರಿಸಿದ್ದಾರೆ. ಅವಳ ಎದುರು ಒಬ್ಬ ಸ್ವಾಮೀಜಿ ಆ ಹುಡುಗಿಯನ್ನು ತೋರಿಸಿ 'ನೋಡಿ ಇವಳೇ ನಿಮ್ಮ ದುರದೃಷ್ಟ, ಅವಳನ್ನು ನೀವು ಕಾಗದದ ಚೆಂಡುಗಳಿಂದ ಹೊಡೆಯಿರಿ, ನಿಮಗೆ ಅದೃಷ್ಟ ಬರುತ್ತದೆ' ಎಂದು ಹೇಳುತ್ತಾನೆ. ಜನರೆಲ್ಲಾ ಕಾಗದದ ಚೆಂಡುಗಳಿಂದ ಹೊಡೆಯಲು ಪ್ರಾರಂಭಿಸುತ್ತಾರೆ. ಆಗ ಹುಡುಗಿ ಬೇಡ ಬೇಡ ಎಂದು ಕಿರುಚುತ್ತಾಳೆ. ಹಲ್ಲೆಕೋರರ ಗುಂಪಿನಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಹಾಗೂ ಇಬ್ಬರು ಪೇದೆಗಳೂ ಇರುತ್ತಾರೆ. ಒಬ್ಬ ಕಪ್ಪು ಹುಡುಗಿ ಹೇಗೆ ದುರದೃಷ್ಟ ಆಗುತ್ತಾಳೆ? ಸಮಾಜಕ್ಕೆ ಈ ಧಾರಾವಾಹಿ ಯಾವ ಸಂದೇಶ ಕೊಡುತ್ತಿದೆ? ಪೊಲೀಸರ ಬಗ್ಗೆ ಜನ ಏನು ಅಂದುಕೊಳ್ಳಬೇಕು? ಇಂತಹ ದೃಶ್ಯಗಳನ್ನು ಪ್ರಸಾರ ಮಾಡುವಾಗ ಕಾನೂನು, ಸಮಾಜದ ಹಿತದೃಷ್ಟಿಯಿಂದ ಯೋಚಿಸಬೇಕು.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

## ಉಡುಗೊರೆಗೆ ನಿಬಂಧನೆಗಳು ಭಾರ!

ಕಲರ್ಸ್ ಕನ್ನಡದಲ್ಲಿ ಹೊಸ ಧಾರಾವಾಹಿ ಆರಂಭಿಸುವಾಗ ವೀಕ್ಷಕರನ್ನು ಸೆಳೆಯಲು ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ಧಾರಾವಾಹಿ ಪ್ರದರ್ಶನದ ವೇಳೆ ಆಯಾ ಕಂತಿಗೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳಿ, ಸರಿ ಉತ್ತರವನ್ನು ನೀಡಿದ ಅದೃಷ್ಟವಂತರಿಗೆ ಬಹುಮಾನ ನೀಡುತ್ತಿದ್ದಾರೆ. 'ನಿನಗಾಗಿ' ಧಾರಾವಾಹಿ ಸಂದರ್ಭದಲ್ಲಿ ಸೀರೆಯನ್ನು ವಿಜೇತರಿಗೆ ನೀಡಿದ್ದರು. ಈಗ 'ದೃಷ್ಟಿಬೊಟ್ಟು' ಸಂದರ್ಭಕ್ಕೆ ಕಲರ್ ಟೀವಿ ನೀಡುತ್ತಿದ್ದಾರೆ.

ಮೊದಲು ಸ್ಪರ್ಧೆಯಲ್ಲಿ ಭಾಗವಹಿಸಲು ಮಿಸ್ ಕಾಲ್ ಮಾಡಿದ್ರೆ ಸಾಕಾಗಿತ್ತು. ಈಗ ಮಿಸ್ ಕಾಲ್ ನೀಡಿದ ನಂತರ ಸ್ಪರ್ಧೆಯಲ್ಲಿ ಭಾಗವಹಿಸಿದಕ್ಕೆ ಧನ್ಯವಾದದ ಸಂದೇಶದ ಜೊತೆ 26 ನಿಬಂಧನೆಗಳಿಗೆ ಒಪ್ಪಿಗೆ ಸೂಚಿಸಬೇಕು. ನಮ್ಮ ಮೊಬೈಲ್ ಸಂಖ್ಯೆ ನೀಡಿ ಲಿಂಕ್ ಒತ್ತಬೇಕು. ಈ ದಿನಗಳಲ್ಲಿ ಹಲವಾರು ಮೋಸದ ಜಾಲಗಳು ತಲೆ ಎತ್ತುತ್ತಿವೆ. ಹೀಗಿರುವಾಗ 'ಲಿಂಕ್' ಅಂದರೆ ಭಯ. ವಾಹಿನಿ ನೀಡುವ ನಂಬರ್ ಕೂಡ ಕರ್ನಾಟಕದ್ದಲ್ಲ ಎಂದು ಟ್ರೂ ಕಾಲರ್‌ನಿಂದ ಗೊತ್ತಾಯಿತು. ಉಡುಗೊರೆಯ ಸ್ಪರ್ಧೆಗೆ ಇಷ್ಟೆಲ್ಲ ನಿಬಂಧನೆಗಳು ಅವಶ್ಯವೇ?

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಮೋಹಕ ವನಸಿರಿ ದರ್ಶನ

'ಯಾನ ತಾಣ' ಕಾರ್ಯಕ್ರಮದ ಮೂಲಕ 'ಚಂದನ' ವಾಹಿನಿ ಪ್ರೇಕ್ಷಣೀಯ ಸ್ಥಳಗಳನ್ನು ಪರಿಚಯಿಸುತ್ತದೆ. ರಮ್ಯ, ಐತಿಹಾಸಿಕ ಸ್ಥಳಗಳ ದರ್ಶನದ ಜೊತೆ ಸಮರ್ಪಕ ವಿವರಣೆ ನೀಡುವ ಮೂಲಕ ಪ್ರವಾಸದ ಅನುಭವವನ್ನು ವೀಕ್ಷಕರಿಗೆ ನೀಡುತ್ತಿದೆ.

ಈಚೆಗೆ ಶಿವಮೊಗ್ಗದ ಮಂಡಗದ್ದೆ ಪಕ್ಷಿಧಾಮ, ಜೋಗ ಜಲಪಾತ, ಸಕ್ರೆಬೈಲು ಆನೆ ಶಿಬಿರ, ಕುಪ್ಪಳಿ, ಕವಿಶೈಲ, ಕೆಳದಿ, ಇಕ್ಕೇರಿ, ಕೊಡಚಾದ್ರಿ ಶ್ರೇಣಿ – ಹೀಗೆ ಅನೇಕ ಪ್ರೇಕ್ಷಣೀಯ ಸ್ಥಳಗಳ ದರ್ಶನ ಮಾಡಿಸಿದರು. ಮಳೆಗಾಲದ ತುಂತುರು ಹನಿಯ, ಮೋಡ ಕವಿದ ವಾತಾವರಣದಲ್ಲಿ ವನಸಿರಿಯ ಸೊಬಗನ್ನು ನೀಡಿದ ಚಂದನಕ್ಕೆ ವಂದನೆಗಳು.

—ಭಾರತೀ ಗಂಗಾಧರ್, ಬೆಂಗಳೂರು

## ನಮ್ಮನ್ನು ಬೆಳೆಸುವ ಕನ್ನಡ!

ಚಂದನ ವಾಹಿನಿಯ 'ಶುಭೋದಯ ಕರ್ನಾಟಕ'ದಲ್ಲಿ ಪ್ರಸಾರವಾದ ನಾಗರಾಜ ವಸ್ತಾರೆಯವರ ಸಂದರ್ಶನ ಅತ್ಯಂತ ಉತ್ತಮವಾಗಿತ್ತು. ಅವರ ಮಾತು, ವ್ಯಕ್ತಿತ್ವ ವಿಶಿಷ್ಟ ಅನಿಸಿತು. ಅವರು ಹೇಳಿದ 'ಕನ್ನಡ ಭಾಷೆಯನ್ನು ನಾವು ಬೆಳೆಸಬೇಕಿಲ್ಲ. ಅದೇ ನಮ್ಮನ್ನು ಬೆಳೆಸುತ್ತದೆ' ಎಂಬ ಮಾತು ತುಂಬ ಹಿಡಿಸಿತು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಬೆಳಕು ಸ್ಮರಿಸಿದ ಅಂಕಿತಾ



ಝೀ ಕನ್ನಡದ 'ಕಾಮಿಡಿ ಕಿಲಾಡಿ'ಯ ಇತ್ತೀಚಿನ ಪ್ರೀಮಿಯರ್ ಲೀಗ್ ಭಾವನಾತ್ಮಕ ಶ್ರದ್ಧಾಂಜಲಿಗೆ ಸಾಕ್ಷಿಯಾಯಿತು. 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ಪ್ರಚಾರಕ್ಕೆ ಬಂದ ನಟಿ ಅಂಕಿತಾ, 'ನಿರೂಪಣಾ ಲೋಕದ ಬೆಳಕು' ಎಂದು ಬಣ್ಣಿಸಿ ನಟಿ, ನಿರೂಪಕಿ ಅಪರ್ಣಾ ವಸ್ತಾರೆ ಅವರನ್ನು ಭಾವತುಂಬಿದ ಮಾತಿನಿಂದ ಸ್ಮರಿಸಿದ್ದು ಅರ್ಥಪೂರ್ಣ.

—ವಾ. ಮುರಳೀಧರ, ತೀರ್ಥಹಳ್ಳಿ

## ಮಹಿಳಾ ವಿಲನ್! ಚಾಳಿ ಕೊನೆಯಾಗಲಿ

ಸಮಾಜದಲ್ಲಿ ಮಹಿಳೆಯರಿಗೆ ಇರುವ ಗೌರವವನ್ನು ಇಂದಿನ ಧಾರಾವಾಹಿಗಳು ಕಳೆಯುತ್ತಿವೆ. ಮೊದಲೆಲ್ಲಾ ಧಾರಾವಾಹಿ ಅಥವಾ ಸಿನಿಮಾಗಳಲ್ಲಿ ಖಳನಾಯಕರು ಕ್ರೌರ್ಯದಲ್ಲಿ ಎದ್ದು ಕಾಣುತ್ತಿದ್ದರು. ಈಗ ಎಲ್ಲಾ ಕಡೆ ಖಳನಾಯಕಿಯರೇ ತುಂಬಿದ್ದಾರೆ. ನಮ್ಮ ಹಿರಿಯರು ಹೆಣ್ಣನ್ನು ಗೌರವದಿಂದ ನೋಡಬೇಕೆಂದು ಹೇಳುತ್ತಾರೆ. ಅಂತಹ ಹೆಣ್ಣಿನಲ್ಲಿ ಕೆಡುಕಿನ ಪರಾಕಾಷ್ಠೆಯನ್ನು ಹುಡುಕುವುದು ಸರಿಯಲ್ಲ. ಈ ಮೂಲಕ ಸಮಾಜಕ್ಕೆ ಯಾವ ಸಂದೇಶ ಕೊಡಲು ಹೊರಟಿದ್ದಾರೋ ದೇವರೇ ಬಲ್ಲ. ಮಹಿಳೆಯರನ್ನು ಖಳನಾಯಕಿಯರಾಗಿ ಬಿಂಬಿಸುವುದು ನಿಲ್ಲಿಸಲಿ ಎಂಬುದೇ ನಮ್ಮ ಆಶಯ.

—ಅಂಬಿಕಾ ಭಟ್

## 'ರಾಮಾಚಾರಿ' ತಪ್ಪದಿರಲಿ ದಾರಿ

ಕಲರ್ಸ್ ಕನ್ನಡ ವಾಹಿನಿಯ 'ರಾಮಾಚಾರಿ' ಧಾರಾವಾಹಿಯಲ್ಲಿ ನಾಯಕಿಯ ತಾಯಿಯೇ ಎಲ್ಲ ರೀತಿಯಿಂದಲೂ ಖಳನಾಯಕಿ. ಯಾವುದೇ ತಾಯಿ ಮಕ್ಕಳ ಮದುವೆಗೆ ಶುಭವನ್ನು ಬಯಸುತ್ತಾಳೆಯೇ ಹೊರತು ವಿನಾಶವನ್ನು ಬಯಸುವುದಿಲ್ಲ. ಮಕ್ಕಳ ಹಿತಕ್ಕೆ ಶ್ರಮಿಸುವ ಆಕೆಯನ್ನು ಇಲ್ಲಿ ಶತ್ರುವಿನಂತೆ ತೋರಿಸುತ್ತಿದ್ದಾರೆ. ಅದೇ ನಾಯಕಿಯ ತಂದೆಯಲ್ಲಿ ಸಜ್ಜನಿಕೆಯ ವ್ಯಕ್ತಿತ್ವವನ್ನು ಬಿಂಬಿಸುತ್ತಿರುವಾಗ, ಆತನ ಜೊತೆ ದಶಕಗಳ ಕಾಲ ಸಂಸಾರ ಮಾಡಿದವಳು ಹೇಗೆ ದುಷ್ಟಳಾಗುತ್ತಾಳೆ? ಚಾರುಲತಾ ಮತ್ತು ರಾಮಾಚಾರಿಯ ಮದುವೆಯನ್ನು ಪದೇ ಪದೇ ಮಾಡುವ ಉದ್ದೇಶವಾದರೂ ಏನು? ಒಂದೇ ಜೋಡಿಗೆ ಎಷ್ಟು ಸಾರಿ ಮದುವೆ ಮಾಡಬೇಕು? ಸರಿಯಾದ ದಾರಿಯಲ್ಲಿ ಕಥೆಯನ್ನು ಮುನ್ನಡೆಸಲಿ.

—ವಾಸುದೇವ, ಹಾಸನ